ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 4, September-October 2025, Pp. 88-97
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಆಧುನಿಕ ಗ್ರಂಥಾಲಯಗಳ ಕಾರ್ಯಾಚರಣೆಯಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆ: ಒಂದು ಅವಲೋಕನ

**ರಘು ಡಿ**

ಉಪನ್ಯಾಸಕರು, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗ, ಕೊಡಚಾದ್ರಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹೊಸನಗರ, ಶಿವಮೊಗ್ಗ

***Abstract:***

*ಆಧುನಿಕ ಯುಗದಲ್ಲಿ ತಂತ್ರಜ್ಞಾನ ಎಂಬುದು ಶರವೇಗದಲ್ಲಿ ಬೆಳೆಯುತ್ತಿರುವ ಕ್ಷೇತ್ರವಾಗಿರುವುದ್ದರಿಂದ ಗ್ರಂಥಾಲಯಗಳು ಕೂಡ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದು ಅನಿವಾರ್ಯವಾಗಿದೆ. ಗ್ರಂಥಾಲಯಗಳು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವುದ್ದರಿಂದ ತನ್ನ ಎಲ್ಲಾ ವಿಭಾಗಗಳಲ್ಲಿ ಅಂದರೆ ಪರಿಚಲನ ವಿಭಾಗ, ತಾಂತ್ರಿಕ ವಿಭಾಗ, ನಿಯತಕಾಲಿಕ ವಿಭಾಗ, ಖರೀದಿ ವಿಭಾಗ, ಪರಾಮರ್ಶನ ವಿಭಾಗ ಇತ್ಯಾದಿ ವಿಭಾಗಗಳನ್ನು ಗ್ರಂಥಾಲಯ ನಿರ್ವಹಣಾ ತಂತ್ರಾಂಶಗಳ ಮೂಲಕ ಗಣಕಯಂತ್ರದಲ್ಲಿಯೇ ನಿರ್ವಹಿಸಬಹುದು. ಅದೇ ರೀತಿ ತಂತ್ರಜ್ಞಾನವನ್ನು ಬಳಸಿಕೊಂಡು ಉಲ್ಲೇಖ ಸೇವೆ, ದಾಖಲೆಗಳ ನಕಲು ಸೇವೆ, ದಾಖಲೆಗಳ ವಿತರಣೆ ಸೇವೆ, ಪರಾಮರ್ಶನ ಸೇವೆ, ಪ್ರಚಲಿತ ಜಾಗೃತ ಸೇವೆ, ಆಯ್ದ ವಿತರಣ ಸೇವೆ ಇತ್ಯಾದಿ ಸೇವೆಗಳನ್ನು ತಮ್ಮ ಓದುಗರಿಗೆ ನೀಡುತ್ತಾರೆ. ಹಾಗೆಯೇ ಈ ತಂತ್ರಜ್ಞಾನವನ್ನು ಬಳಸಿಕೊಂಡು ಓದುಗರಿಗೆ ಮಾಹಿತಿಯನ್ನು ವೇಗವಾಗಿ ತಲುಪಿಸುವುದರ ಮೂಲಕ ಓದುಗರ ಸಮಯವನ್ನು ಉಳಿತಾಯ ಮಾಡಬಹುದು ಮತ್ತು ತಂತ್ರಜ್ಞಾನದ ಸಹಾಯದಿಂದ ಗ್ರಂಥಾಲಯದ ಪುಸ್ತಕಗಳು ಕಳ್ಳತನವಾಗುವುದನ್ನು ತಡೆಯಬಹುದು. ಉದಾರಣೆಗೆ ಸಿಸಿಟಿವಿ ಮತ್ತು ಆರ್.ಎಫ್.ಐ.ಡಿ ತಂತ್ರಜ್ಞಾನವನ್ನು ಅಳವಡಿಸುವುದು, ಅದೇ ರೀತಿ ಗ್ರಂಥಾಲಯಗಳಲ್ಲಿ ತಂತ್ರಜ್ಞಾನವನ್ನು ಬಳಸುವುದರ ಉದ್ದೇಶಗಳೆಂದರೆ ಮಾಹಿತಿಯನ್ನು ಬಳಕೆದಾರರಿಗೆ ಸುಲಭವಾಗಿ ಸಿಗುವಂತೆ ಮಾಡುವುದು, ಓದುಗರು ಗ್ರಂಥಾಲಯವನ್ನು ದಿನದ 24 ಗಂಟೆಗಳಲ್ಲಿಯೂ ಬಳಕೆ ಮಾಡಿಕೊಳ್ಳುಬಹುದು ಹಾಗೂ ಗ್ರಂಥಾಲಯದ ಸಂಗ್ರಹವನ್ನು ಓದುಗರ ಅನುಗುಣಕ್ಕೆ ತಕ್ಕಂತೆ ಸಂಗ್ರಹಿಸಲು ಸಹಾಯಕವಾಗಿದೆ ಹಾಗೇಯೇ ಗ್ರಂಥಾಲಯಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಅನುಷ್ಠಾನ ಮಾಡಲು ಎದುರುಸುತ್ತಿರುವ ಸವಾಲುಗಳನ್ನು ಸಹ ಚರ್ಚಿಸಲಾಗಿದೆ.*

***Keywords:*** *ಐ.ಸಿ.ಟಿ, ಡಿಜಿಟಲ್ ಗ್ರಂಥಾಲಯ, ವಿದ್ಯುನ್ಮಾನ ಸಂಪನ್ಮೂಲಗಳು, ಗ್ರಂಥಾಲಯ ಸೇವೆಗಳು.*

## ಪೀಠಿಕೆ

ಆಧುನಿಕ ಯುಗದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಕ್ಷೇತ್ರವು ಅತೀ ವೇಗವಾಗಿ ಬೆಳೆಯುತ್ತಿದೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಪ್ರಭಾವ

***Please cite this article as:*** ರಘು ಡಿ. (2025). ಆಧುನಿಕ ಗ್ರಂಥಾಲಯಗಳ ಕಾರ್ಯಾಚರಣೆಯಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆ: ಒಂದು ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(4), 88–97

ಅತೀ ಹೆಚ್ಚಿದೆ. ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನವು ಎಲ್ಲಾ ಕ್ಷೇತ್ರಗಳಲ್ಲಿ ಕ್ರಾಂತಿಯನ್ನೆ ಸೃಷ್ಟಿಸಿದೆ. ಏಕೆಂದರೆ ಹೊಸ ಹೊಸ ತಂತ್ರಜ್ಞಾನಗಳನ್ನು ಅಭಿವೃದ್ಧಿ ಮಾಡಿರುವುದ್ದರಿಂದ ಜಗತ್ತಿನಲ್ಲಿ ಸಾಕಷ್ಟು ಬದಲಾವಣೆಯನ್ನು ತಂದಿದೆ. ಅದೇ ರೀತಿ ಗ್ರಂಥಾಲಯಗಳಲ್ಲಿಯೂ ಸಹ ಈ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ಇತ್ತೀಚಿನ ದಿನಗಳಲ್ಲಿ ಸಾಕಷ್ಟು ಪ್ರಭಾವವನ್ನು ಬೀರಿದೆ ಹಾಗೂ ಬದಲಾವಣೆಗಳು ಆಗಿವೆ. ಡಾ. ಎಸ್. ಆರ್. ರಂಗನಾಥ್ ರವರು ಗ್ರಂಥಾಲಯದ ಪಂಚಸೂತ್ರಗಳಲ್ಲಿ ಹೇಳಿರುವ ಐದನೇ ಸೂತ್ರವಾದ "ಗ್ರಂಥಾಲಯಗಳು ಬೆಳೆಯುತ್ತಿರುವ ಸಂಸ್ಥೆ" ಈ ಸೂತ್ರದಂತೆ ಗ್ರಂಥಾಲಯಗಳು ಅಭಿವೃದ್ಧಿಯಾಗಿವೆ ಮತ್ತು ಮುಂದೆಯೂ ಸಹ ಬೆಳೆಯುತ್ತೀರುತ್ತವೆ, ಹಿಂದಿನ ಕಾಲದ ಗ್ರಂಥಾಲಯಗಳಿಗೂ ಮತ್ತು ಪ್ರಸ್ತುತ ಇರುವ ಗ್ರಂಥಾಲಯಗಳಿಗೂ ಸಾಕಷ್ಟು ಬದಲಾಗಿರುವುದನ್ನು ಗಮನಿಸಬಹುದು ಆಧುನಿಕ ಯುಗದಲ್ಲಿ ಮಾಹಿತಿಯೆಂಬುದು ಬಳಕೆದಾರರ ಅಂಗೈಯಲ್ಲಿದೆ. ಅದೇ ರೀತಿ ಗ್ರಂಥಾಲಯಗಳು ಸಹ ತಂತ್ರಜ್ಞಾನವನ್ನು ಬಳಸಿಕೊಂಡು ಮಾಹಿತಿಯನ್ನು ಓದುಗರ ಬಳಿಗೆ ತಲುಪಿಸುವ ಕೆಲಸ ಮಾಡುತ್ತಿವೆ.

ಆಧುನಿಕ ಗ್ರಂಥಾಲಯಗಳಲ್ಲಿ ಗಣಕಯಂತ್ರದ ಬಳಕೆ ಹೆಚ್ಚಾಗಿದೆ, ಆದ್ದರಿಂದ ಗ್ರಂಥಾಲಯದ ಪ್ರತಿಯೊಂದು ವಿಭಾಗಗಳಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದರ ಮೂಲಕ ಓದುಗರು ಕೇಳುವ ಮಾಹಿತಿಯನ್ನು ನಿಖರವಾಗಿ ಮತ್ತು ಸುಲಭವಾಗಿ ಹುಡುಕಲು ಈ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ಸಹಾಯಕವಾಗುತ್ತಿದೆ, ಗ್ರಂಥಾಲಯದ ಎಲ್ಲಾ ವಿಭಾಗಳಲ್ಲಿಯೂ ಅಂದರೆ ಪರಿಚಲನ ವಿಭಾಗ, ತಾಂತ್ರಿಕ ವಿಭಾಗ, ನಿಯತಕಾಲಿಕ ವಿಭಾಗ, ಉಲ್ಲೇಖ ವಿಭಾಗ, ಮುಂತಾದ ವಿಭಾಗಗಳಲ್ಲಿ ಗಣಕಯಂತ್ರಗಳನ್ನು ಬಳಕೆ ಮಾಡುತ್ತಿರುವುದ್ದರಿಂದ ಗ್ರಂಥಾಲಯಗಳು ಸ್ವಯಂಚಾಲಿತವಾಗಿ ಕಾರ್ಯ ನಿರ್ವಹಿಸುತ್ತಿವೆ. ಗ್ರಂಥಾಲಯಗಳಲ್ಲಿ ಗಣಕೀಕೃತ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದ್ದರಿಂದ ಮಾಹಿತಿಯನ್ನು ವೇಗವಾಗಿ ಮತ್ತು ನಿಖರವಾಗಿ ಕ್ರೋಢೀಕರಿಸಿ ಮತ್ತು ಸಂಗ್ರಹಿಸಿ ಅಷ್ಟೇ ವೇಗವಾಗಿ ಓದುಗರಿಗೆ ತಲುಪಿಸುವ ಕೆಲಸವನ್ನು ಈ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಸಹಾಯದಿಂದ ಮಾಡುತ್ತಿವೆ.

**ಸಾಹಿತ್ಯ ವಿಮರ್ಶೆ**

ನರೇಂದ್ರ ಕುಮಾರ್ ಭೋಯಿ (2017) ಬರೆದಿರುವ 'ಯೂಸ್ ಆಫ್ ಇನ್ಫಾರ್ಮೇಶನ್ ಕಮ್ಯುನಿಕೇಷನ್ ಟೆಕ್ನಾಲಜಿ ಅಂಡ್ ಲೈಬ್ರರಿ ಅಪರೇಷನ್' ಲೇಖನದಲ್ಲಿ ಗ್ರಂಥಾಲಯದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆ ಯಾವ ರೀತಿ ಇದೆ ಎಂಬುದನ್ನು ವಿಶ್ಲೇಷಿಸಿದ್ದಾರೆ, ಗ್ರಂಥಾಲಯಗಳಲ್ಲಿ ಸಂವಹನ ತಂತ್ರಜ್ಞಾನಗಳು, ನಿಯಂತ್ರಣ ತಂತ್ರಜ್ಞಾನಗಳು, ಸಮಾಜಿಕ ಮಾಧ್ಯಮಗಳು ಹಾಗೂ ಗ್ರಂಥಾಲಯದ ಭದ್ರತೆಯಲ್ಲಿ ತಂತ್ರಜ್ಞಾನಗಳ ಬಳಕೆಯ ಬಗ್ಗೆ ಹೇಳಿದ್ದಾರೆ ಹಾಗೇಯೇ ಗ್ರಂಥಾಲಯಗಳ ಸ್ವಯಂ ಚಾಲಿತ ತಂತ್ರಾಂಶಗಳ ಬಳಕೆಯಿಂದ ಪುಸ್ತಕಗಳ ಖರೀದಿ, ಗ್ರಂಥ ಸೂಚಿ, ಗ್ರಂಥ ವರ್ಗೀಕರಣ ಮತ್ತು ಗ್ರಂಥಗಳ ಪರಿಚಲನ ವಿಭಾಗದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಬಳಕೆಯನ್ನು ಹೇಳಿದ್ದಾರೆ.

ಮಹಮ್ಮದ್ ಶರೀಪ್ ಮತ್ತು ಮಹಮ್ಮದ್ ನಜ್ಮಲ್ (2006) ಇನ್ಫಾಮೇಶನ್ ಅಂಡ್ ಕಮ್ಯುನಿಕೇಷನ್ ಟೆಕ್ನಾಲಜಿ ಇನ್ ಲೈಬ್ರರ್ನಿ: ಏ ನ್ಯೂವ್ ಡೈಮೇಷನ್ ಇನ್ ಲೈಬ್ರರೀಯನ್‌ಶಿಪ್' ಲೇಖನದಲ್ಲಿ ಗ್ರಂಥಾಲಯಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಘಟಕಗಳಾದ ಕಂಪ್ಯೂಟರ್ ತಂತ್ರಜ್ಞಾನದ, ಸಂವಹನ ತಂತ್ರಜ್ಞಾನದ, ಮುದ್ರಣ ತಂತ್ರಜ್ಞಾನವನ್ನು ಗ್ರಂಥಾಲಯಗಳಲ್ಲಿ ಬಳಕೆ ಮಾಡುತ್ತಿದ್ದಾರೆ ಅದೇ ರೀತಿ ಮಾಹಿತಿಗಳನ್ನು ಇ–ಸಂಪನ್ಮೂಲಗಳ ರೂಪದಲ್ಲಿ ಹೆಚ್ಚಾಗಿ ಸಂಗ್ರಹಿಸುತ್ತಾರೆ ಈ ಮಾಹಿತಿಯನ್ನು ಒಂದೇ ಸಮಯಕ್ಕೆ ಅನೇಕ

ಬಳಕೆದಾರರು ಬಳಸುತ್ತಾರೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

ಶೀನಿವಾಸ್ ಪ್ರಸಾದ್ ಮೈಲಪಿಲ್ಲಿ (2023) 'ಇಂಪ್ಯಾಕ್ಟ್ ಇಂಪಾರ್ಟೆನ್ಸ್ ಆಫ್ ಐಸಿಟಿ ಇನ್ ಪ್ರವಿಜೆಷನ್ ಆಫ್ ಲೈಬ್ರರಿ ಸರ್ವಿಸ್ಸ್' ಲೇಖನದಲ್ಲಿ ಗ್ರಂಥಾಲಯಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಬಳಕೆ ಮತ್ತು ಇದನ್ನು ಅನುಷ್ಠಾನಗೊಳಿಸಲು ಇರುವ ಸವಾಲುಗಳನ್ನು ವಿಶ್ಲೇಷಿಸಿದ್ದಾರೆ, ಹಾಗೇಯೇ ಗ್ರಂಥಾಲಯಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಬಳಸಿಕೊಂಡು ಉಲ್ಲೇಖ ಸೇವೆ, ಮಾಹಿತಿ ಆಯ್ದ ಸೇವೆ, ಪ್ರಚಲಿತ ಜಾಗೃತ ಸೇವೆ, ದಾಖಲೆ ನಕಲುಪ್ರತಿ ಸೇವೆ ಈ ರೀತಿಯ ಮುಂತಾದ ಸೇವೆಗಳನ್ನು ನೀಡುತ್ತವೆ. ಇದರಿಂದ ಗ್ರಂಥಾಲಯಗಳಲ್ಲಿ ಮಾಹಿತಿಯನ್ನು ಸುಲಭವಾಗಿ ಸಂಗ್ರಹಿಸಬಹುದು ಮತ್ತು ವೇಗವಾಗಿ ಓದುಗರಿಗೆ ತಲುಪಿಸಲು ಸಾಧ್ಯವೆಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

### ಅಧ್ಯಯನದ ಉದ್ದೇಶಗಳು

1. ಗ್ರಂಥಾಲಯದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆಯ ಬಗ್ಗೆ ತಿಳಿಯುವುದು.
2. ಗ್ರಂಥಾಲಯ ಸೇವೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆಯನ್ನು ತಿಳಿಯುವುದು.
3. ಗ್ರಂಥಾಲಯಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆಯಿಂದ ಆಗುವ ಉಪಯೋಗಗಳನ್ನು ತಿಳಿಯುವುದು.
4. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಅನುಷ್ಠಾನಗೊಳಿಸಲು ಗ್ರಂಥಾಲಯಗಳು ಎದುರುಸುತ್ತಿರುವ ಸವಾಲುಗಳನ್ನು ಅಧ್ಯಯನ ಮಾಡುವುದು.

### ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ (ಐ.ಸಿ.ಟಿ) ಅರ್ಥ

ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಎಂಬುವುದು ಗಣಕಯಂತ್ರ ಮತ್ತು ಅದರ ಘಟಕಗಳು, ತಂತ್ರಾಂಶಗಳು, ಅಪ್ಲಿಕೇಷನ್‌ಗಳು, ಡಿಜಿಟಲ್ ಸಾಧನಗಳು, ಸಂವಹನ ಸಾಧನಗಳು, ಡೇಟಾ ಬೇಸ್‌ಗಳು ಇತ್ಯಾದಿ ವ್ಯವಸ್ಥೆಗಳ ಗುಂಪಾಗಿದೆ. ಹಾಗೇಯೇ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವೆಂದರೆ ಮಲ್ಟಿ ಮೀಡಿಯಾ ಸ್ವರೂಪದಲ್ಲಿ ಮಾಹಿತಿಯನ್ನು ರಚಿಸಿ ಅದನ್ನು ಸಂಗ್ರಹಿಸಿ ಕ್ರೋಢೀಕರಿಸಿ ಸಂವಹನ ಮಾಡಲು ಅನುಗುಣವಾಗಿ ವ್ಯವಸ್ಥೆ ಮಾಡಲು ಗಣಕಯಂತ್ರದ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗಳ ಸುವ್ಯವಸ್ಥಿತ ಸಂಯೋಜನೆಯೇ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ.

### ಆಧುನಿಕ ಕಾಲಕ್ಕೆ ತಕ್ಕಂತೆ ಬದಲಾಗಿರುವ ಗ್ರಂಥಾಲಯಗಳು

ಗ್ರಂಥಾಲಯಗಳು ದಿನದಿಂದ ದಿನಕ್ಕೆ ಅನೇಕ ಬದಲಾವಣೆಗಳಾಗಿವೆ, ಅಂದರೆ ಮಾಹಿತಿಗಳಲ್ಲಿ ಮತ್ತು ಭೌತಿಕವಾಗಿಯೂ ಕಾಲಕ್ಕೆ ಅನುಗುಣವಾಗಿ ತನ್ನ ಸ್ವರೂಪಗಳಲ್ಲಿ ಈ ರೀತಿ ಬದಲಾಗಿರುವುದನ್ನು ಕಾಣಬಹುದು.

### ಸಾಂಪ್ರದಾಯಕ ಗ್ರಂಥಾಲಯಗಳು

ಸಾಂಪ್ರದಾಯಕ ಗ್ರಂಥಾಲಯಗಳು ಬಹಳ ಹಿಂದಿನ ಕಾಲದಿಂದಲ್ಲೂ ಇರುವ ಗ್ರಂಥಾಲಯಗಳು ಈ ಗ್ರಂಥಾಲಯಗಳು ಮಾಹಿತಿಯನ್ನು ಮುದ್ರಣ ರೂಪದಲ್ಲಿ ಸಂಗ್ರಹಿಸುತ್ತವೆ ಅಂದರೆ ಪುಸ್ತಕಗಳು, ನಿಯತಕಾಲಿಕೆಗಳು, ದಿನಪತ್ರಿಕೆಗಳು, ವಿಶ್ವಕೋಶಗಳು, ಇತ್ಯಾದಿಗಳನ್ನು ಸಂಗ್ರಹಿಸುತ್ತವೆ. ಓದುಗರು ಮಾಹಿತಿಯನ್ನು ಪಡೆಯಲು ದೈಹಿಕವಾಗಿ ಗ್ರಂಥಾಲಯಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಪಡೆಯಬೇಕು ಈ ರೀತಿಯ ಗ್ರಂಥಾಲಯಗಳೇ ಸಾಂಪ್ರದಾಯಕ ಗ್ರಂಥಾಲಯಗಳು.

### ಮಿಶ್ರ ಗ್ರಂಥಾಲಯಗಳು

ಮಿಶ್ರ ಗ್ರಂಥಾಲಯಗಳು ಎರಡು ರೀತಿಯಲ್ಲಿ ಕೆಲಸ ಮಾಡುತ್ತವೆ ಅಂದರೆ ಮಾನವ ಸಂಪನ್ಮೂಲದ ಜೊತೆಗೆ ಗಣಕಯಂತ್ರದ ಸಹಾಯದಿಂದ ಸ್ವಯಂ

ಚಾಲಿತವಾಗಿ ಗ್ರಂಥಾಲಯದ ಕಾರ್ಯಗಳು ನಡೆಯುತ್ತವೆ. ಕೆಲವು ಕಾರ್ಯಗಳನ್ನು ತಂತ್ರಜ್ಞಾನ ಬಳಸಿಕೊಂಡು ಮತ್ತು ಇನ್ನೂ ಕೆಲವು ಕಾರ್ಯಗಳನ್ನು ಸಿಬ್ಬಂದಿಯ ಸಹಾಯದಿಂದ ಗ್ರಂಥಾಲಯದ ಕಾರ್ಯಗಳು ನಡೆಯುತ್ತವೆ. ಈ ರೀತಿಯ ಗ್ರಂಥಾಲಯಗಳಲ್ಲಿ ಮಾಹಿತಿಯನ್ನು ಡಿಜಿಟಲ್ ಮತ್ತು ಮುದ್ರಣ ರೂಪಗಳೆರಡರಲ್ಲಿಯೂ ಸಂಗ್ರಹಿಸಿರುತ್ತಾರೆ.

**ಡಿಜಿಟಲ್ ಗ್ರಂಥಾಲಯಗಳು**

ಡಿಜಿಟಲ್ ಗ್ರಂಥಾಲಯಗಳು ಪೂರ್ಣವಾಗಿ ತನ್ನ ಎಲ್ಲಾ ಕಾರ್ಯಗಳನ್ನು ಸ್ವಯಂಚಾಲಿತವಾಗಿ ನಿರ್ವಹಿಸುತ್ತವೆ, ಈ ಗ್ರಂಥಾಲಯಗಳು ಗಣಕಯಂತ್ರ ಮತ್ತು ನೆಟ್‌ವರ್ಕ್‌ಗಳ ಸಹಾಯದಿಂದ ಓದುಗರು ಮಾಹಿತಿಯನ್ನು ತಾವು ಇರುವ ಪ್ರದೇಶದಲ್ಲಿಯೇ ನಿಖರವಾಗಿ ಮತ್ತು ವೇಗವಾಗಿ ಮಾಹಿತಿಯನ್ನು ಪಡೆಯುತ್ತಾರೆ. ಈ ಗ್ರಂಥಾಲಯಗಳಲ್ಲಿ ಮಾಹಿತಿಯನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸುಲಾಭವಾಗಿ ರವಾನಿಸುತ್ತವೆ, ಈ ಗ್ರಂಥಾಲಯಗಳಲ್ಲಿ ಎಲ್ಲಾ ಮಾಹಿತಿಯನ್ನು ವಿದ್ಯುನ್ಮಾನ ರೂಪದಲ್ಲಿ ಸಂಗ್ರಹಿಸುತ್ತಾರೆ.

***ಹಸಿರು* ಗ್ರಂಥಾಲಯಗಳು**

ಇತ್ತೀಚಿನ ದಿನಗಳಲ್ಲಿ ಹಸಿರು ಗ್ರಂಥಾಲಯಗಳು ಎಂಬ ಪರಿಕಲ್ಪನೆಯು ಆರಂಭವಾಗಿದೆ, ಹಸಿರು ಗ್ರಂಥಾಲಯ ಎಂಬುದು ಬಹಳ ವಿಭಿನ್ನವಾದ ಗ್ರಂಥಾಲಯದ ಪ್ರಕಾರವಾಗಿದೆ ಏಕೆಂದರೆ ಈ ಗ್ರಂಥಾಲಯಗಳು ನಮ್ಮ ಪರಿಸರದಲ್ಲಿ ನೈಸರ್ಗಿಕವಾಗಿ ಸಿಗುವಂತಹ ಮರ–ಗಿಡಗಳು, ಸೂರ್ಯನ ಬೆಳಕು, ಇತ್ಯಾದಿ ನೈಸರ್ಗಿಕವಾಗಿ ಸಿಗುವ ಸಂಪನ್ಮೂಲಗಳ ಸಾಹಯದಿಂದ ಈ ಗ್ರಂಥಾಲಯಗಳು ಕಾರ್ಯ ನಿರ್ವಹಿಸುತ್ತವೆ.

***ವರ್ಚುವಲ್ ಗ್ರಂಥಾಲಯಗಳು***

ವರ್ಚುವಲ್ ಗ್ರಂಥಾಲಯಗಳಿಗೆ ಸಾಂಪ್ರದಾಯಿಕ ಗ್ರಂಥಾಲಯಗಳಿಗೆ ಇರುವಂತೆ ಯಾವುದೇ ರೀತಿಯ ಭೌತಿಕವಾದ ಕಟ್ಟಡ ಇರುವುದಿಲ್ಲ ಮತ್ತು ಭೌತಿಕವಾಗಿ ಪುಸ್ತಕಗಳನ್ನು ಸಂಗ್ರಹಿಸುವುದಿಲ್ಲ ಇದನ್ನು ಕಟ್ಟಡ ಇಲ್ಲದ ಗ್ರಂಥಾಲಯವೆಂದು ಸಹ ಕರೆಯಬಹುದು. ಈ ರೀತಿಯ ಗ್ರಂಥಾಲಯಗಳಲ್ಲಿ ಮಾಹಿತಿ ಸಂಪನ್ಮೂಲಗಳನ್ನು ಎಲೆಕ್ಟ್ರಾನಿಕ್ ಮತ್ತು ನೆಟ್‌ವರ್ಕ್‌ನಲ್ಲಿ ಲಭ್ಯವಿರುವ ಲಿಂಕ್‌ಗಳು ಹಾಗೂ ಯುಆರ್‌ಎಲ್ ಗಳಲ್ಲಿ ಮಾಹಿತಿಯನ್ನು ಸಂಗ್ರಹಿಸಿ ಶೇಖರಿಸುತ್ತಾರೆ, ಈ ಮಾಹಿತಿಯನ್ನು ಪಡೆಯಲು ಬಳಕೆದಾರರು ಗಣಕಯಂತ್ರಗಳ ಸಹಾಯದಿಂದ ಲಾಗಿನ್ ಆಗಿ ತಮಗೆ ಬೇಕಾದ ಮಾಹಿತಿಯನ್ನು ಪಡೆಯುತ್ತಾರೆ.

## ಆಧುನಿಕ ಗ್ರಂಥಾಲಯದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆ

ಆಧುನಿಕ ಗ್ರಂಥಾಲಯಗಳಲ್ಲಿ ಪ್ರಸ್ತುತ ದಿನಗಳಲ್ಲಿ ತಂತ್ರಜ್ಞಾನವನ್ನು ಹೆಚ್ಚಾಗಿ ಬಳಕೆ ಮಾಡುಲಾಗುತ್ತಿದೆ ಇದರಿಂದ ಮಾಹಿತಿಯನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಗಳಿಗೆ ವೇಗವಾಗಿ ಗ್ರಂಥಾಲಯದ ಬಳಕೆದಾರರಿಗೆ ತಲುಪಿಸಲು ಸಹಾಯಕವಾಗುತ್ತಿದೆ.

ಗ್ರಂಥಾಲಯದಲ್ಲಿ ಈ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಅದರ ಘಟಕಗಳ ಆಧಾರದ ಮೇಲೆ ಎರಡು ರೀತಿಯಾಗಿ ವಿಂಗಡಿಸಿ ತಂತ್ರಜ್ಞಾನವನ್ನು ಬಳಕೆ ಮಾಡುತ್ತಿದ್ದಾರೆ. ಮೊದಲನೆಯದಾಗಿ ಗಣಕಯಂತ್ರ ತಂತ್ರಜ್ಞಾನಗಳು ಎರಡನೇಯದಾಗಿ ಸಂವಹನ ತಂತ್ರಜ್ಞಾನಗಳು.

**ಗಣಕಯಂತ್ರ ತಂತ್ರಜ್ಞಾನಗಳು**

ಆಧುನಿಕ ಯುಗದಲ್ಲಿ ಪ್ರತಿಯೊಂದು ಕ್ಷೇತ್ರದಲ್ಲಿಯೂ ಗಣಕಯಂತ್ರವನ್ನು ಗಣನೀಯವಾಗಿ ಬಳಕೆ ಮಾಡಲಾಗುತ್ತಿದೆ, ಕಂಪ್ಯೂಟರ್ ಇಲ್ಲವೆಂದರೆ ಯಾವ ಕೆಲಸಗಳು ಆಗುವುದಿಲ್ಲ ಎಂಬುವಂತೆ ಕಂಪ್ಯೂಟರ್ ಅಥವಾ ಗಣಕಯಂತ್ರಕ್ಕೆ ಅವಲಂಬಿತರಾಗಿದ್ದೇವೆ. ಇದೇ ರೀತಿ ಗ್ರಂಥಾಲಯದಲ್ಲಿಯು ಸಹ ಗಣಕಯಂತ್ರವನ್ನು

ಗ್ರಂಥಾಲಯದ ಎಲ್ಲಾ ವಿಭಾಗಗಳಲ್ಲಿ ಬಳಕೆ ಮಾಡುತ್ತಿದ್ದೇವೆ, ಪ್ರಮುಖವಾಗಿ ಗ್ರಂಥಗಳನ್ನು ಖರೀದಿಸಲು, ಗ್ರಂಥಗಳ ಪರಿಚಲನೆಯಲ್ಲಿ, ನಿಯತಕಾಲಿಕೆಯಲ್ಲಿ, ಸಂಗ್ರಹ ಅಭಿವೃದ್ದಿಯಲ್ಲಿ, ಗ್ರಂಥ ಸೂಚಿ, ಗ್ರಂಥ ವರ್ಗಿಕರಣ, ಗ್ರಂಥಾಲಯದ ಭದ್ರತೆ, ಮಾಹಿತಿ ವಿನಿಮಯ ಮುಂತಾದ ಕಾರ್ಯಾಗಳಿಗೆ ಗಣಕಯಂತ್ರವನ್ನು ಅವಲಂಬಿಸಿದೆ.

***ಇ–ಸಂಪನ್ಮೂಲಗಳನ್ನು ಸಂಗ್ರಹಿಸಲು***

ಇತ್ತೀಚಿನ ಯುವ ಪೀಳಿಗೆಯು ಮುದ್ರಣ ಮಾಹಿತಿಯನ್ನು ಬಳಕೆ ಮಾಡುವುದಕ್ಕಿಂತ ಹೆಚ್ಚಾಗಿ ವಿದ್ಯುನ್ಮಾನ ರೂಪದಲ್ಲಿ ಇರುವ ಮಾಹಿತಿಯನ್ನು ಬಳಕೆ ಮಾಡುತ್ತಿರುವುದ್ದರಿಂದ ಈಗಿನ ಗ್ರಂಥಾಲಯಗಳು ಸಹ ಎಲೆಕ್ಟ್ರಾನಿಕ್ ಸಂಪನ್ಮೂಲವನ್ನು ತಂತ್ರಜ್ಞಾನದ ಸಹಾಯದಿಂದ ಹೆಚ್ಚಾಗಿ ಸಂಗ್ರಹಿಸುತ್ತಿವೆ, ಅದೇ ರೀತಿ ಮಾಹಿತಿಯನ್ನು ಗಣಕಯಂತ್ರದಲ್ಲಿ ಸಂಗ್ರಹಿಸುವುದ್ದರಿಂದ ಪ್ರಚಲಿತ ಮಾಹಿತಿಯನ್ನು ಓದುಗರಿಗೆ ನೀಡುತ್ತವೆ. ಇತ್ತೀಚಿನ ದಿನಗಳಲ್ಲಿ ಗ್ರಂಥಾಲಯಗಳು ವಿದ್ಯುನ್ಮಾನ ಮಾಹಿತಿಯನ್ನು ಮತ್ತು ಇಂಟರ್‌ನೆಟ್ ಸಂಪನ್ಮೂಲಗಳನ್ನು ಸಂಗ್ರಹಿಸಲು ಗಣಕಯಂತ್ರವನ್ನು ಬಳಸುತ್ತಾರೆ.

***ಗ್ರಂಥಾಲಯ ನಿರ್ವಹಣಾ ತಂತ್ರಾಂಶಗಳನ್ನು ನಿರ್ವಹಿಸಲು.***

ಗ್ರಂಥಾಲಯಗಳ ಎಲ್ಲಾ ವಿಭಾಗಗಳನ್ನು ನಿರ್ವಹಣೆ ಮಾಡಲ ಗಣಕಯಂತ್ರಗಳಲ್ಲಿ ಗ್ರಂಥಾಲಯ ನಿರ್ವಹಣಾ ತಂತ್ರಾಂಶಗಳನ್ನು ಸ್ಥಾಪಿಸಿ ನಿಯಂತ್ರಿಸುತ್ತಾರೆ ಇದರಲ್ಲಿ ಪ್ರಮುಖವಾಗಿ ಇ–ಗ್ರಂಥಾಲಯ, ಇ–ಗ್ರಂಥಾಲಯ 4.0, ಸಾಫ್ಟ್‌ವೇರ್ ಆಫ್ ಯುನಿವರ್‌ಸಿಟಿ ಲೈಬ್ರರಿ, ಕೋಹಾ, ಈಸೀಲಿಬ್, ಲಿಬ್ಸಿಸ್ ಇತ್ಯಾದಿ ತಂತ್ರಾಂಶಗಳನ್ನು ಗಣಕಯಂತ್ರದಲ್ಲಿ ಅಳವಡಿಸಿಕೊಂಡು ಇದರ ಮೂಲಕ ಗ್ರಂಥಾಲಯದ ಸಂಪೂರ್ಣ ಕಾರ್ಯಾ ವೈಖರಿಯನ್ನು ಗಣಕಯಂತ್ರದ ಮೂಲಕ ನಿರ್ವಹಿಸುತ್ತಿದ್ದಾರೆ, ಗ್ರಂಥಾಲಯ ನಿರ್ವಹಣಾ ತಂತ್ರಾಂಶಗಳ ಮುಖ್ಯ ಲಕ್ಷಣಗಳರೆಂದರೆ ಗ್ರಂಥಾಲಯದ ವಿಭಾಗಗಳಾದ ಪರಿಚಲನ ವಿಭಾಗ, ತಾಂತ್ರಿಕ ವಿಭಾಗ, ನಿಯತಕಾಲಿಕ ವಿಭಾಗ, ಖರೀದಿ ವಿಭಾಗ, ಸೂಚೀಕರಣ, ವರ್ಗೀಕರಣ, ಗ್ರಂಥ ಸಂಗ್ರಹಣೆ ಮುಂತಾದ ಕಾರ್ಯಗಳನ್ನು ಈ ತಂತ್ರಾಂಶದಲೇ ನಿರ್ವಹಿಸುಬಹುದು ಹಾಗೆಯೇ ಮಾಹಿತಿಯನ್ನು ವೇಗವಾಗಿ ಬಳಕೆದಾರರಿಗೆ ಸುಲಭವಾಗಿ ತಲುಪಿಸಬಹುದು.

***ಮಾಹಿತಿಯನ್ನು ಕ್ರೋಢೀಕರಿಸಲು ಮತ್ತು ಹುಡುಕಲು***

ಆಧುನಿಕ ಗ್ರಂಥಾಲಯಗಳು ಮಾಹಿತಿಯನ್ನು ಗಣಕಯಂತ್ರದಲ್ಲಿ ಕ್ಯಾಟಲಾಗ್, ಆನ್‌ಲೈನ್ ಕ್ಯಾಟಲಾಗ್, ಓಪ್ಯಾಂಕ್ ಮುಂತಾದ ಗ್ರಂಥಸೂಚಿಗಳ ಸಹಾಯದಿಂದ ಬಳಕೆದಾರರು ಮಾಹಿತಿಯನ್ನು ವೇಗವಾಗಿ ಹುಡುಕಲು ಗಣಕಯಂತ್ರಗಳು ಪೂರಕವಾಗಿವೆ ಅದೇ ರೀತಿ ಗ್ರಂಥಾಲಯಗಳಲ್ಲಿ ಮಾಹಿತಿಯನ್ನು ಸಂಗ್ರಹಿಸಲು ಸಹ ಕಂಪ್ಯೂಟರ್‌ಗಳನ್ನು ಬಳಸುತ್ತಾರೆ.

***ಗ್ರಂಥಾಲಯದ ಭದ್ರತೆಗೆ ತಂತ್ರಜ್ಞಾನದ ಬಳಕೆ***

ಆಧುನಿಕ ಗ್ರಂಥಾಲಯಗಳಲ್ಲಿ ಗ್ರಂಥಗಳು ಕಳ್ಳತನವಾಗದೆ ಇರಲು ಗ್ರಂಥಾಲಯಗಳಲ್ಲಿ ಹಲವಾರು ತಂತ್ರಜ್ಞಾನವನ್ನು ಬಳಸುತ್ತಾರೆ ಅದರಲ್ಲಿ ಮುಖ್ಯವಾಗಿ ಆರ್.ಎಫ್.ಐ.ಡಿ (ರೇಡಿಯೋ ಫ್ರೀಕ್ವೆನ್ಸಿ ಐಡೆಂಡಿಫಿಕೇಷನ್) ಮತ್ತು ಸಿಸಿಟಿವಿ ತಂತ್ರಜ್ಞಾನವನ್ನು ಬಳಸುತ್ತಾರೆ. ಈ ಆರ್.ಎಫ್ ಐ.ಡಿ ತಂತ್ರಜ್ಞಾನವು ಗಂಥಲಾಯದಲ್ಲಿ ಮಸ್ತಕಗಳು ಕಳ್ಳತನವಾಗದ ರೀತಿಯಲ್ಲಿ ನೋಡಿಕೊಳ್ಳುತ್ತದೆ.

***ಕ್ಯೂ. ಆರ್ ಕೋಡ್ ಮತ್ತು ಬಾರ್ ಕೋಡ್ ತಂತ್ರಜ್ಞಾನದ***

ಆಧುನಿಕ ಗ್ರಂಥಾಲಯಗಳಲ್ಲಿ ಓದುಗರಿಗೆ ಮಾಹಿತಿಯನ್ನು ವೇಗವಾಗಿ ನೀಡಲು ಮತ್ತು ಗ್ರಂಥಗಳನ್ನು ಎರವಲು ನೀಡಲು ಮಸ್ತಕಗಳಿಗೆ ಕ್ಯೂ.ಆರ್ ಕೋಡ್ ಮತ್ತು ಬಾರ್ ಕೋಡ್ ತಂತ್ರಜ್ಞಾನ ಬಳಸುತ್ತಾರೆ, ಈ ತಂತ್ರಜ್ಞಾನವು

ಗ್ರಂಥಾಲಯಗಳಲ್ಲಿ ಪುಸ್ತಕಗಳಿಗೆ ಅಂಟಿಸುವುದ್ದರಿಂದ ಅದನ್ನು ಸ್ಕ್ಯಾನ್ ಮಾಡಿ ಪುಸ್ತಕವನ್ನು ಓದುಗರಿಗೆ ನೀಡುತ್ತಾರೆ.

**ಸಂವಹನ ತಂತ್ರಜ್ಞಾನಗಳು**

ಆಧುನಿಕ ಗ್ರಂಥಾಲಯಗಳು ಸಂವಹನ ತಂತ್ರಜ್ಞಾನವನ್ನು ಬಹಳ ಪರಿಣಾಮಕಾರಿಯಾಗಿ ಬಳಸುತ್ತಿವೆ, ಗ್ರಂಥಾಲಯಗಳು ಹೆಚ್ಚಾಗಿ ಸಂವಹನ ತಂತ್ರಜ್ಞಾನವನ್ನು ಇ–ಅಂಚೆ ಮೂಲಕ ಸಂವಹನ ನೆಡೆಸುತ್ತವೆ. ಅದೇ ರೀತಿ ಗ್ರಂಥಾಲಯಗಳು ಆಡಿಯೋ–ವೀಡಿಯೋ ಸಂಪನ್ಮೂಲಗಳು, ವೆಬ್ 2.0 (ಫೇಸ್‌ಬುಕ್, ವಾಟ್ಸ್‌ಆಫ್, ಬ್ಲಾಗಿಂಗ್, ವಿಕಿಪೀಡಿಯಾ, ಯೂಟ್ಯೂಬ್ ಇತ್ಯಾದಿ) ಈ ರೀತಿಯ ಸಂವಹನ ತಂತ್ರಜ್ಞಾನವನ್ನು ಬಳಸಿಕೊಂಡು ಸಂವಹನವನ್ನು ನೆಡೆಸುವುದಾರ ಜೊತೆಗೆ ಮಾಹಿತಿಯನ್ನು ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಗಳಿಗೆ ರವಾನಿಸಲು ಸಂವಹನ ತಂತ್ರಜ್ಞಾನವನ್ನು ಬಳಸುತ್ತಾರೆ.

**ಗ್ರಂಥಾಲಯ ಸೇವೆಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆ**

ಆಧುನಿಕ ಗ್ರಂಥಾಲಯಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಬಳಸಿಕೊಂಡು ಹಲವಾರು ಸೇವೆಗಳನ್ನು ಬಳಕೆದರಾರಿಗೆ ನೀಡುತ್ತಿವೆ, ಗ್ರಂಥಾಲಯಗಳು ತಂತ್ರಜ್ಞಾನವನ್ನು ಬಳಸಿಕೊಂಡು ಪರಿಣಾಮಕಾರಿಯಾಗಿ ಓದುಗಾರಿಗೆ ತಮ್ಮ ಸೇವೆಯನ್ನು ನೀಡುತ್ತಿವೆ.

***ಪರಾಮರ್ಶನ ಸೇವೆ***

ಗ್ರಂಥಾಲಯಗಳು ತಂತ್ರಜ್ಞಾನವನ್ನು ಬಳಸಿಕೊಂಡು ತಮ್ಮ ಓದುಗರಿಗೆ ಉಲ್ಲೇಖ ಸೇವೆಯನ್ನು ನೀಡುತ್ತವೆ, ಓದುಗರು ಕೇಳುವಂತಹ ಪ್ರಶ್ನೆಗಳಿಗೆ ಗಣಕಯಂತ್ರದ ಸಹಾಯದಿಂದ ಅವರಿಗೆ ಮಾಹಿತಿಯನ್ನು ಒದಗಿಸುವುದರ ಮೂಲಕ ಅಲ್ಪಾವಧಿ ಪರಾಮರ್ಶನ ಸೇವೆ ಮತ್ತು ಧೀರ್ಘಾವಧಿ ಪರಾಮರ್ಶನ ಸೇವೆಯೆಂದು ಎರಡು ರೀತಿಯಲ್ಲಿ ಮಾಹಿತಿಯನ್ನು ಒದಗಿಸುತ್ತವೆ.

***ಎಲೆಕ್ಟ್ರಾನಿಕ್ ದಾಖಲೆಗಳ ವಿತರಣಾ ಸೇವೆ***

ಆಧುನಿಕ ಗ್ರಂಥಾಲಯಗಳು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಬಳಸಿಕೊಂಡು ಓದುಗರು ಕೇಳುವಂತಹ ಮಾಹಿತಿಯನ್ನು ನೇರವಾಗಿ ಆ ಓದುಗನ ಬಳಿಗೆ ಮಾಹಿತಿಯನ್ನು ತಲುಪಿಸಿ ಮತ್ತು ಓದುಗನಿಗೆ ತಮ್ಮ ಅಂಗೈಯಲ್ಲಿ ಮಾಹಿತಿ ಸಿಗುವಂತೆ ಗಣಕಯಂತ್ರದ ಸಹಾಯದಿಂದ ಈ ಸೇವೆಯನ್ನು ಗ್ರಂಥಾಲಯಗಳು ನೀಡುತ್ತಿವೆ.

***ಪ್ರಚಲಿತ ಜಾಗೃತ ಸೇವೆ***

ಆಧುನಿಕ ಗ್ರಂಥಾಲಯಗಳು ತಮ್ಮ ಬಳಕೆದಾರರಿಗೆ ಮಾಹಿತಿಯನ್ನು ವೇಗವಾಗಿ ತಲುಪಿಸಲು ತಂತ್ರಜ್ಞಾನದ ಮೂಲಕ ಸ್ಪಷ್ಟವಾದ ಮಾಹಿತಿಯನ್ನು ಆಯಾ ಆಯಾ ವಿಷಯಗಳಲ್ಲಿ ಆಸಕ್ತಿ ಇರುವ ಓದುಗರಿಗೆ ಆ ವಿಷಯದಲ್ಲಿನ ಇತ್ತೀಚಿನ ಬೆಳವಣಿಗಳ ಮಾಹಿತಿಯನ್ನು ಸಂಗ್ರಹಿಸಿ ಈ ಮಾಹಿತಿಯನ್ನು ತಮ್ಮ ಗ್ರಂಥಾಲಯದ ಬಳಕೆದಾರ ವೃತ್ತಿಪರರಿಗೆ, ವಿದ್ಯಾರ್ಥಿಗಳಿಗೆ ಈ ಸೇವೆಯನ್ನು ನೀಡುತ್ತಾರೆ.

**ಮಾಹಿತಿಯ ಆಯ್ದು ಪ್ರಸರಣ ಸೇವೆ**

ಮಾಹಿತಿ ಆಯ್ದು ಪ್ರಸರಣ ಸೇವೆ ಎಂಬುದು ಬಹಳ ಮುಖ್ಯವಾಗಿ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳಲ್ಲಿನ ಗ್ರಂಥಾಲಯಗಳಲ್ಲಿ ಹೆಚ್ಚಾಗಿ ಬಳಕೆ ಮಾಡುವ ಸೇವೆಯಾಗಿದೆ, ಈ ಸೇವೆಯನ್ನು ಸಂಶೋಧನೆಗಳಿಗೆ ಅಗತ್ಯತೆಗಳ ಆಧಾರದ ಮೇಲೆ ಸೂಕ್ತವಾದ ಮಾಹಿತಿಯನ್ನು ಅದೇ ವಿಷಯದ ಬಳಕೆದಾರಿಗೆ ಅಥವಾ ಸಂಶೋಧಕರಿಗೆ ನೀಡುವ ಸೇವೆಯಾಗಿದೆ. ಈ ಸೇವೆಯನ್ನು ನೀಡಲು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವು ಬಹಳ ಮುಖ್ಯವಾಗಿ ಬೇಕಾಗುತ್ತದೆ.

**ಆನ್‌ಲೈನ್ ಪಬ್ಲಿಕ್ ಆಕ್ಸಸ್ ಕ್ಯಾಟಲಾಗ್ (ಓಪ್ಯಾಕ್)**

ಆಧುನಿಕ ಗ್ರಂಥಾಲಯಗಳು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಸಹಾಯದಿಂದ ಓಪ್ಯಾಕ್ ಸೇವೆಯನ್ನು ನೀಡುತ್ತವೆ, ಈ ಓಪ್ಯಾಕ್‌ನ್ನು

ಬಳಸಿಕೊಂಡು ಬಳಕೆದಾರರು ತಮಗೆ ಬೇಕಾದ ಮಾಹಿತಿ ಅಥವಾ ಪುಸ್ತಕಗಳು ಗ್ರಂಥಾಲಯದಲ್ಲಿ ಲಭ್ಯವಿದೆಯೋ ಅಥವಾ ಇಲ್ಲವೋ ಎಂಬುದನ್ನು ಓಪ್ಯಾಕ್ ಮೂಲಕ ಹುಡುಕಿಕೊಳ್ಳಬಹುದು. ಇದೇ ರೀತಿ ಗ್ರಂಥಾಲಯಗಳು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಬಳಸಿಕೊಂಡು ಹಲವಾರು ರೀತಿಯ ಸೇವೆಗಳನ್ನು ನೀಡುತ್ತಿದ್ದಾರೆ.

**ಆಧುನಿಕ ಗ್ರಂಥಾಲಯಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆಯ ಉದ್ದೇಶಗಳು**

ಆಧುನಿಕ ಗ್ರಂಥಾಲಯಗಳು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಹಲವಾರು ರೀತಿಯ ಉದ್ದೇಶಗಳಿಗೆ ಬಳಕೆ ಮಾಡುತ್ತಿದ್ದಾರೆ ಹಾಗೂ ಗ್ರಂಥಾಲಯದ ಎಲ್ಲಾ ವಿಭಾಗಗಳಲ್ಲಿಯೂ ತಂತ್ರಜ್ಞಾನವನ್ನು ಬಳಕೆ ಮಾಡಲಾಗುತ್ತಿದೆ.

- ಗ್ರಂಥಾಲಯದ ಸೇವೆಗಳನ್ನು ಓದುಗರಿಗೆ ಪರಿಣಾಮಕಾರಿಯಾಗಿ ನೀಡುವುದಕ್ಕಾಗಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಬಳಸುತ್ತಾರೆ.
- ಗ್ರಂಥಾಲಯ ನಿರ್ವಹಣಾ ತಂತ್ರಾಂಶಗಳ ಮೂಲಕ ಗ್ರಂಥಾಲಯವನ್ನು ಸುಧಾರಣೆ ಮಾಡಲು.
- ಗುಣಮಟ್ಟದ ಮಾಹಿತಿಯನ್ನು ಓದುಗರಿಗೆ ನೀಡುವುದು.
- ಸಂಶೋಧನೆ ಮತ್ತು ಅಭಿವೃದ್ಧಿಗೆ ಪೂರಕವಾಗುವ ಪ್ರಸ್ತುತ ಅಥವಾ ಪ್ರಚಲಿತ ಮಾಹಿತಿಯನ್ನು ಓದುಗರಿಗೆ ನೀಡಲು.
- ಗ್ರಂಥಾಲಯದ ಓದುಗರಿಗೆ ಮಾಹಿತಿಯು ಅವರ ಅಂಗೈಯಲ್ಲಿ ದೊರಕುವಂತೆ ಮಾಡುಲು.
- ಓದುಗರಿಗೆ ಉಪಯೋಗವಾಗುವ ಮಾಹಿತಿಯನ್ನು ಕ್ರೋಢೀಕರಿಸಲು ಮತ್ತು ಸಂಗ್ರಹಿಸುವುದು.
- ಓದುಗರಿಗೆ ಮಾಹಿತಿಯನ್ನು ವೇಗವಾಗಿ ಮತ್ತು ಸುಲಭವಾಗಿ ದೊರಕುವಂತೆ ಮಾಡುವುದು.

ಒಟ್ಟಾರೆಯಾಗಿ ಗ್ರಂಥಾಲಯಗಳಲ್ಲಿ ಮಾಹಿತಿ ಮತ್ತು ತಂತ್ರಜ್ಞಾನದ ಬಳಕೆಯ ಉದ್ದೇಶಗಳೆಂದರೆ ಓದುಗರಿಗೆ ಮಾಹಿತಿಯನ್ನು ಹಾಗೂ ಗ್ರಂಥಾಲಯದ ಸೇವೆಗಳನ್ನು ಸುಧಾರಿಸುವುದು, ಹಾಗೇಯೇ ಪರಿಣಾಮಕಾರಿಯಾಗಿ ಮಾಹಿತಿಯು ಓದುಗರಿಗೆ ಸಿಗುವಂತೆ ಮಾಡುವುದಾಗಿದೆ.

**ಆಧುನಿಕ ಗ್ರಂಥಾಲಯಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಬಳಕೆಯಿಂದಾಗುವ ಉಪಯುಕ್ತಗಳು**

ಆಧುನಿಕ ಗ್ರಂಥಾಲಯಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಬಳಕೆ ಮಾಡುವುದರಿಂದ ಹಲವಾರು ರೀತಿಯ ಅನುಕೂಲಗಳಾಗುತ್ತಿವೆ ಅವುಗಳೆಂದರೆ ಮುಖ್ಯವಾಗಿ ಗ್ರಂಥಾಲಯದ ಮಾಹಿತಿಯನ್ನು ಪರಿಣಾಮಕಾರಿಯಾಗಿ ಮತ್ತು ವೇಗವಾಗಿ ಓದುಗರಿಗೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ತಂತ್ರಜ್ಞಾನದ ಸಹಾಯದಿಂದ ರವಾನಿಸುತ್ತಾರೆ ಮತ್ತು ಗ್ರಂಥಾಲಯಗಳಲ್ಲಿ ಎಲೆಕ್ಟ್ರಾನಿಕ್ ಸಂಪನ್ಮೂಲವನ್ನು ಸಂಗ್ರಹಿಸುವುದ್ದರಿಂದ ಅತೀ ಹೆಚ್ಚು ಮಾಹಿತಿಯನ್ನು ಸಂಗ್ರಹಿಸಬಹುದು, ಇದ್ದರಿಂದ ಸ್ಥಳದ ಕೊರತೆಯು ಕಾಡುವುದಿಲ್ಲ. ಹಾಗೆಯೇ ಗ್ರಂಥಾಲಯಗಳನ್ನು ಸ್ವಯಂ ಚಾಲಿತವಾಗಿ ನಿರ್ವಹಣೆ ಮಾಡಬಹುದು ಇದರಿಂದ ಗ್ರಂಥಾಲಯದ ಸಿಬ್ಬಂದಿ ಕೊರತೆಯನ್ನು ನೀಗಿಸಬಹುದು, ಅದೇ ರೀತಿ ಗ್ರಂಥಾಲಯವನ್ನು ಓದುಗರು ದಿನದ 24 ಗಂಟೆಯು ಬಳಕೆ ಮಾಡಿಕೊಳ್ಳಬಹುದು ಅಂದರೆ ತಂತ್ರಜ್ಞಾನದ ಮೂಲಕ ಇ–ಸಂಪನ್ಮೂಲವನ್ನು ಕಂಪ್ಯೂಟರ್ ಅಥವಾ ಮೊಬೈಲ್ ಮೂಲಕ ಯಾವಾಗಲಾದರೂ ಬಳಕೆ ಮಾಡಿಕೊಳ್ಳಬಹುದು, ಹಾಗೆಯೇ ಗ್ರಂಥಾಲಯದ ಸೇವೆಗಳನ್ನು ಓದುಗರಿಗೆ ಪರಿಣಾಮಕಾರಿಯಾಗಿ ತಂತ್ರಜ್ಞಾನದ ಮೂಲಕ

ನೀಡಬಹುದು ಇದರಿಂದ ಓದುಗರ ಸಮಯವು ಸಹ ಉಳಿಯುತ್ತದೆ, ಓದುಗರು ಭೌತಿಕವಾಗಿ ಗ್ರಂಥಾಲಯಕ್ಕೆ ಭೇಟಿ ಮಾಡದೇ ತಾವು ಇರುವ ಪ್ರದೇಶದಲ್ಲಿಯೇ ಮಾಹಿತಿಯನ್ನು ಪಡೆದುಕೊಳ್ಳಬಹುದು. ಒಟ್ಟಾರೆಯಾಗಿ ಹೇಳುವುದಾದರೆ ಗ್ರಂಥಾಲಯದಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಬಳಕೆ ಮಾಡುವುದ್ದರಿಂದ ಅನೇಕ ರೀತಿಯ ಉಪಯೋಗಗಳು ಆಗುತ್ತಿವೆ.

### ಆಧುನಿಕ ಗ್ರಂಥಾಲಯಗಳು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಅನುಷ್ಠಾನ ಮಾಡಲು ಎದುರಿಸುತ್ತಿರುವ ಸವಾಲುಗಳು

ತಂತ್ರಜ್ಞಾನವು ಎಷ್ಟೇ ಮುಂದುವರೆದರೂ ಅದರಿಂದ ಸಮಸ್ಯೆಗಳು ಇದ್ದೆ ಇರುತ್ತವೆ, ಹಾಗೂ ತಂತ್ರಜ್ಞಾನದಿಂದ ಎಷ್ಟು ಉಪಯೋಗವಿದೆಯೋ ಅಷ್ಟೇ ಪ್ರಮಾಣದಲ್ಲಿ ಸಮಸ್ಯೆಗಳು ಅಥವಾ ಸವಾಲುಗಳು ಇವೆ. ಅದೇ ರೀತಿ ಗ್ರಂಥಾಲಯಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಅನುಷ್ಠಾನ ಮಾಡಲು ಹಲವಾರು ರೀತಿಯ ಸವಾಲುಗಳನ್ನು ಎದರುಸುತ್ತಿವೆ.

***ಹಣಕಾಸಿನ ಕೊರತೆ***

ಆಧುನಿಕ ಗ್ರಂಥಾಲಯಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ವ್ಯವಸ್ಥಿತವಾಗಿ ಅನುಷ್ಠಾನ ಮಾಡಲು ಮುಖ್ಯವಾಗಿ ಹಣಕಾಸಿನ ತೊಂದರೆಯು ಅಡ್ಡಿಯಾಗಿದೆ, ಏಕೆಂದರೆ ತಂತ್ರಜ್ಞಾನವನ್ನು ಅಳಡಿಸಿಕೊಳ್ಳಲು ಅದಕ್ಕೆ ಬೇಕಾದ ಕಂಪ್ಯೂಟರ್ ನೆಟ್‌ವರ್ಕ್‌ಗಳು, ತಂತ್ರಂಶಗಳು ಮುಂತಾದ ಎಲೆಕ್ಟ್ರಾನಿಕ್ ಉಪಕರಣಗಳ ಬೆಲೆಯು ಮಾರುಕಟ್ಟೆಯಲ್ಲಿ ದುಬಾರಿಯಿರುವುದ್ದರಿಂದ ಹಾಗೂ ಗ್ರಂಥಾಲಯಕ್ಕೆ ಸಂಬಂಧಪಟ್ಟ ಸಂಸ್ಥೆಗಳು ಸರಿಯಾದ ಪ್ರಮಾಣದಲ್ಲಿ ಅನುಧಾನವನ್ನು ನೀಡದೆ ಇರುವುದ್ದರಿಂದ ಗ್ರಂಥಾಲಯಗಳು ಹಣಕಾಸಿನ ಸಮಸ್ಯೆಯನ್ನು ಎದರುಸುತ್ತಿವೆ.

***ಗ್ರಂಥಾಲಯದ ಸಿಬ್ಬಂದಿಗಳಿಗೆ ತಾಂತ್ರಿಕ ಜ್ಞಾನದ ಕೊರತೆ***

ಗ್ರಂಥಾಲಯದಲ್ಲಿ ಕೆಲಸ ಮಾಡುವ ಕೆಲವು ಸಿಬ್ಬಂದಿಗಳಿಗೆ ಸರಿಯಾಗಿ ತಂತ್ರಜ್ಞಾನದಲ್ಲಿ ಜ್ಞಾನ ಕೊರತೆ ಇರುವುದು ಬಹು ದೊಡ್ಡ ಸಮಸ್ಯೆಯಾಗಿದೆ, ಹಾಗೆಯೇ ತಂತ್ರಜ್ಞಾನವನ್ನು ಬಳಕೆ ಮಾಡಲುಬಾರದೇ ಇರುವುದು ಸಹ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಅನುಷ್ಠಾನ ಮಾಡಲು ಅಡ್ಡಿಯಾಗಿದೆ ಎಂದರು ತಪ್ಪಾಗಲಾರದು.

***ಬಳಕೆದಾರರಲ್ಲಿ ತಂತ್ರಜ್ಞಾನದ ಕೌಶಲ್ಯತೆಯ ಕೊರತೆ***

ಗಣಕಯಂತ್ರದಲ್ಲಿ ಮಾಹಿತಿಯನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆಯನ್ನು ಮಾಡಲು ಹಾಗೂ ತಂತ್ರಜ್ಞಾನದಲ್ಲಿ ಯಾವುದೇ ರೀತಿಯ ಕೌಶಲ್ಯತೆಯನ್ನು ಹೊಂದಿಲ್ಲದಿದ್ದಾಗ ಬಳಕೆದಾರರು ತಂತ್ರಜ್ಞಾನವನ್ನು ಗ್ರಂಥಾಲಯದಲ್ಲಿ ಉಪಯೋಗ ಮಾಡಲು ಸಾಧ್ಯವಿಲ್ಲ. ಇಲ್ಲಿ ಮುಖ್ಯವಾಗಿ ಓದುಗರು ಅಥವಾ ಬಳಕೆದಾರರಿಗೂ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದಲ್ಲಿ ಕೌಶಲ್ಯತೆಯನ್ನು ಪಡೆದಿರಬೇಕು ಆಗ ಮಾತ್ರ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಗ್ರಂಥಾಲಯದಲ್ಲಿ ಬಳಕೆ ಮಾಡಲು ಸಾಧ್ಯ.

***ಮಾಹಿತಿ ತಂತ್ರಜ್ಞಾನ (ಐ.ಟಿ) ನಿಯಮಗಳಲ್ಲಿ ಜ್ಞಾನದ ಕೊರತೆ***

ಆಧುನಿಕ ಯುಗದಲ್ಲಿ ಕಾಲ ಕಾಲಕ್ಕೆ ತಂತ್ರಜ್ಞಾನದಲ್ಲಿ ಬದಲಾವಣೆಗಳಾಗುತ್ತವೆ ಮತ್ತು ಇದನ್ನು ಬಳಕೆ ಮಾಡಲು ಸಹ ಕೆಲವು ನಿಯಮಗಳನ್ನು ಗ್ರಂಥಾಲಯಗಳು ಪಾಲಿಸಬೇಕು. ಉದಾಹರಣೆಗೆ ಗ್ರಂಥಾಲಯಗಳಲ್ಲಿ ಇ–ಸಂಪನ್ಮೂಲಗಳನ್ನು ಖರೀದಿ ಮಾಡಲು ಲೇಖಕರು ಅಥವಾ ಅದಕ್ಕೆ ಸಂಬಂಧಿಸಿದ ಪ್ರಕಾಶಕರಿಂದ ಬಳಕೆ ಮಾಡಲು ಪರವಾನಗಿಯನ್ನು ಪಡೆಯುವುದು ನಿಯಮಗಳಿವೆ ಈ ರೀತಿ ನಿಯಮಗಳನ್ನು ತಿಳಿದು

ಕೊಳ್ಳಬೇಕಾಗಿದೆ ಇಲ್ಲದಿದ್ದರೆ ಗ್ರಂಥಾಲಯಗಳಲ್ಲಿ ತಂತ್ರಜ್ಞಾನವನ್ನು ಬಳಕೆ ಮಾಡಲು ಕಷ್ಟಸಾಧ್ಯ.

***ಹಕ್ಕುಸ್ವಾಮ್ಯ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳ ನಿರ್ವಹಣೆ (ಐ.ಪಿ.ಆರ್)***

ಆಧುನಿಕ ಗ್ರಂಥಾಲಯಗಳು ಹಕ್ಕುಸ್ವಾಮ್ಯ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳ ನಿರ್ವಹಣೆಯಲ್ಲಿ ಹಿಂದುಳಿದಿರುವುದು ಬಹು ದೊಡ್ಡ ಸಮಸ್ಯೆಯಾಗಿದೆ, ಗ್ರಂಥಾಲಯಗಳಲ್ಲಿ ಸಂಗ್ರಹಣೆಯನ್ನು ಅಭಿವೃದ್ಧಿ ಮಾಡಬೇಕಾದರೆ ಮುದ್ರಣ ಗ್ರಂಥಗಳನ್ನು ಡಿಜಿಟಲ್ ರೂಪಕ್ಕೆ ರೂಪಾಂತರಿಸಲು ಪ್ರಕಾಶಕರು ಅಥವಾ ಲೇಖಕರಿಂದ ಪರವಾನಗಿ ಪಡೆಯಬೇಕು ಹಾಗೂ ಇ– ಸಂಪನ್ಮೂಲಗಳನ್ನು ಕೊಡುಕೊಳ್ಳಲು ಸಮೇತ ಪರವಾನಾಗಿ ಪಡೆಯಬೇಕು ಈ ರೀತಿಯಾಗಿ ಗ್ರಂಥಾಲಯದಲ್ಲಿ ಹಕ್ಕುಸ್ವಾಮ್ಯ ಮತ್ತು ಬೌದ್ಧಿಕ ಆಸ್ತಿ ಹಕ್ಕುಗಳ ನಿರ್ವಹಣೆ ಮಾಡವುದು ಸಹ ದೊಡ್ಡ ಸಮಮ್ಯೆಯಾಗಿದೆ.

**ಉಪಸಂಹಾರ**

ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನವೆಂಬುದು ವೇಗವಾಗಿ ಬೆಳೆಯುತ್ತಿದೆ ಆದ್ದರಿಂದ ಗ್ರಂಥಾಲಯದ ಬಳಕೆದಾರರು ಸಹ ಆಧುನಿಕತೆಗೆ ತಕ್ಕಂತೆ ತಂತ್ರಜ್ಞಾನಕ್ಕೆ ಅವಲಂಬಿತವಾಗಿರುವುದ್ದರಿಂದ ಗ್ರಂಥಾಲಯಗಳು ಸಹ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಅನುಷ್ಠಾನ ಮಾಡುವುದ್ದರಿಂದ ಗ್ರಂಥಾಲಯಗಳಲ್ಲಿ ಪರಿಣಾಮಕಾರಿಯಾದ ಸೇವೆಗಳನ್ನು ಓದುಗರಿಗೆ ತಲುಪಿಸಲು ಸಾಧ್ಯ ಹಾಗೂ ಮಾಹಿತಿಯನ್ನು ಬಳಕೆದಾರರ ಬಳಿಗೆ ತಲುಪಿಸಬಹುದು. ಆಧುನಿಕ ಯುಗದಲ್ಲಿ ಪ್ರತಿಯೊಬ್ಬ ಓದುಗನು ತಂತ್ರಜ್ಞಾನವನ್ನು ಬಳಸುತ್ತಿರುವುದರಿಂದ ಗ್ರಂಥಾಲಯಗಳು ಸಹ ಈ ತಂತ್ರಜ್ಞಾನವನ್ನು ಬಳಸಿಕೊಂಡ ಗ್ರಂಥಾಲಯದ ಎಲ್ಲಾ ಚಟುವಟಿಕೆಗಳನ್ನು ಸ್ವಯಂಚಾಲಿತವಾಗಿ ನಿಯಂತ್ರಿಸುತ್ತಿದ್ದಾವೆ ಮತ್ತು ಮಾಹಿತಿಯನ್ನು ನಿರ್ವಹಣೆ ಮಾಡುವುದು ಸಹ ಸುಲಭವಾಗಿದೆ. ಹಾಗೆಯೇ ಗ್ರಂಥಾಲಯಗಳಿಗೆ ಸರಿಯಾದ ಪ್ರಮಾಣದಲ್ಲಿ ಅನುದಾನವನ್ನು ನೀಡುವುದ್ದರಿಂದ ಪರಿಣಾಮಕಾರಿಯಾಗಿ ತಂತ್ರಜ್ಞಾನವನ್ನು ಬಳಸಿಕೊಂಡು ಸಂಶೋಧನೆ ಮತ್ತು ಅಭಿವೃದ್ಧಿಗಳಿಗೆ ಪೂರಕವಾಗುವ ಪ್ರಚಲಿತ ಮಾಹಿತಿಯನ್ನು ನೀಡಿದ್ದರಿಂದ ಹೊಸ ಹೊಸ ಅವಿಷ್ಕಾರಗಳನ್ನು ಮಾಡಲು ಗ್ರಂಥಾಲಯಗಳು ಮಾಹಿತಿಯನ್ನು ನೀಡುವುದರ ಮೂಲಕ ಸಹಾಯಕವಾಗುತ್ತಿವೆ ಹಾಗೂ ಗುಣಮಟ್ಟದ ಸಂಶೋಧನೆಯನ್ನು ಕೈಗೊಳ್ಳಲು ಗ್ರಂಥಾಲಯದಲ್ಲಿ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವುದ್ದರಿಂದ ಮಾತ್ರ ಸಾಧ್ಯವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ವೆಂಕಟ್ ರಾಜ್, ಆರ್. ಎಸ್. (2004). ಗ್ರಂಥಾಲಯ ಆಡಳಿತ ಮತ್ತು ನಿರ್ವಹಣೆ. ಶುಭಾ ಮುದ್ರಣಾ ಪ್ರಕಾಶನ. ಪು.12–16
- Abhishek, K. (2025). **Use of information and communication technology (ICT) in library**. *International Journal for Research Trends and Innovation*, **10**(9), 285–296.
- Bhoi, N. K. (2017). **Use of information and communication technology (ICT) and library operation: An overview**. *International Conference on Future Libraries: From Promises and Practices*, 445–451.
- Islam, M. S., & Islam, M. N. (2006). **Information and communication technology (ICT) in libraries: A new dimension in librarianship**. *Asian Journal of Information Technology*, **5**(8), 809–815.

- Mylapilli, S. P. (2023). **Impact and importance of ICT in provision of library services.** *International Journal of Novel Research and Development*, **8**(11), 313–317.
- Raghu, D., & Niranjana, K. (2024). **Smart libraries in the modern world: An overview.** *International Conference on Digital Landscape in Library 4.0 (DDL 4.0)*, 617–622.